ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಆತ ಒತ್ತೆಯಾಳಾಗಿ ಇರಿಸಿಕೊಂಡಿರುವ ಅರಣ್ಯ ಸಿಬ್ಬಂದಿಗಳ ಸ್ಥಿತಿ ಏನು? ಅವರ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ.

ಶ್ರೀ ಜೆ.ಹೆಚ್.ಪಟೇಲ್ : ಒತ್ತೆಯಾಳುಗಳಿಗೆ ಯಾವುದೇ ಅಪಾಯವಿಲ್ಲವೆಂದು ಪೋಲೀಸರು ಹೇಳಿದ್ದಾರೆ.

5.40 ಪಿ.ಎಂ

ಶ್ರೀ ಬಿ.ಎಸ್. ಯಡಿಯೂರಪ್ಪಾ : ಶ್ರೀ ಗೋಪಾಲ್ ಅವರು ವೀರಪ್ಪನ್‌ನ ಬಂಧನದಲ್ಲಿ ಇದ್ದಾನೆಂದು ಇವತ್ತು ಪತ್ರಿಕೆಗಳಲ್ಲಿ ವರದಿ ಬಂದಿದೆ. ಅದರ ಸತ್ಯಾಂಶ ಏನು?

ಶ್ರೀ ಜೆ.ಎಚ್. ಪಟೇಲ್ : ಆ ಬಗ್ಗೆ ನಮಗೆ ಮಾಹಿತಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ವೀರಪ್ಪನ್ ಕಳುಹಿಸಿದ ಕ್ಯಾಸೆಟ್ ತಮಿಳಿನಲ್ಲಿ ಇತ್ತು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ತಮಿಳು ಭಾಷೆಯನ್ನು ಕನ್ನಡಕ್ಕೆ ತರ್ಜುಮೆ ಮಾಡಿದವರು ಯಾರು? ತರ್ಜುಮೆ ಮಾಡುವಾಗ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ?

ಶ್ರೀ ಜೆ.ಎಚ್. ಪಟೇಲ್ : ನಮ್ಮ ಪೋಲೀಸ್ ಇಲಾಖೆಯ ಅಧಿಕಾರಿಗಳು ಕನ್ನಡಕ್ಕೆ ತರ್ಜುಮೆ ಮಾಡಿ ನನಗೆ ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವೀರಪ್ಪನ್ ಅಪಹರಿಸಿರುವ ಅರಣ್ಯ ಇಲಾಖಾ ಸಿಬ್ಬಂದಿ ಪರಿಸ್ಥಿತಿ ಏನು?

ಶ್ರೀ ಜೆ.ಎಚ್. ಪಟೇಲ್ : ತೊಂದರೆ ಏನೂ ಇಲ್ಲ ಎಂದು ನಮಗೆ ಮಾಹಿತಿ ಬಂದಿದೆ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆಗಳು

ಜಿಂದಾಲ್ ಉಕ್ಕುಕಾರ್ಖಾನೆಗೆ 2 ಟಿ.ಎಂ.ಸಿ. ನೀರನ್ನು ತುಂಗಭದ್ರಾ ಜಲಾಶಯದ ರಾಯಬಸವನ ಕಾಲುವೆಯಿಂದ ಬಿಡುಗಡೆ ಮಾಡುವುದಕ್ಕೆ ಬದಲಾಗಿ ತುಂಗಭದ್ರಾ ಜಲಾಶಯದ ಕೋಟಾದಿಂದ ಬಿಡುಗಡೆ ಮಾಡುವುದು.

ಶ್ರೀ ಜಿ. ಶಂಕರೇಗೌಡ (ಹೊಸಪೇಟೆ) : ಮಾನ್ಯ ಅಧ್ಯಕ್ಷರೇ, ಜಿಂದಾಲ್ ಉಕ್ಕು ಕರ್ಖಾನೆಗೆ 2 ಟಿ.ಎಂ.ಸಿ. ನೀರನ್ನು ತುಂಗಭದ್ರಾ ಜಲಾಶಯದ ರಾಯಬಸವ ಕಾಲುವೆಯಿಂದ ಬಿಡುಗಡೆ ಮಾಡುವುದಕ್ಕೆ ಬದಲಾಗಿ ತುಂಗಭದ್ರಾ ಜಲಾಶಯದ ಕೋಟಾದಿಂದ ಬಿಡುಗಡೆ ಮಾಡುವ ಬಗ್ಗೆ ಭಾರಿ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಬಳ್ಳಾರಿ ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವಿಜಯನಗರ ಉಕ್ಕು ಕಾರ್ಖಾನೆಗೆ ತಂಗಭದ್ರಾ ಯೋಜನೆಯಲ್ಲಿನ ಕರ್ನಾಟಕ ಕೋಟಾದಿಂದ 35 ಎಂಬಿಡಿ (2.05 ಟಿಎಂಸಿ) ಯಷ್ಟು ನೀರನ್ನು ಒದಗಿಸಲು 1991ರಲ್ಲಿ ಸರ್ಕಾರವು ತೀರ್ಮಾನಿಸಿರುತ್ತದೆ. ಈ ಉಕ್ಕು ಕಾರ್ಖಾನೆಯಲ್ಲಿ ಒಂದಾದ ಮೆ: ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆಗೆ 24 ಎಂಜಿಡಿಯಷ್ಟು ನೀರನ್ನು (1.40 ಟಿಎಂಸಿ) ನೀಡಬೇಕಿರುತ್ತದೆ. ಸದರಿ ಉಕ್ಕು ಕಾರ್ಖಾನೆಗೆ ರಾಯಬಸವನ ಕಾಲುವೆಯ ಪ್ರಾರಂಭ ಭಾಗದಲ್ಲಿ ನೀರನ್ನು ಪಡೆಯಲು ತೆಗೆದುಕೊಂಡಿರುವ ತೀರ್ಮಾನ ಕುರಿತಂತೆ ಮಾನ್ಯ ಸದಸ್ಯರು ಆಕ್ಷೇಪಿಸಿ ಈ ತೀರ್ಮಾನದಿಂದ ಸದರಿ ಕಾಲುವೆಗಳಡಿಯಲ್ಲಿ ಬರುವ ಅಚ್ಚುಕಟ್ಟುದಾರರಿಗೆ ನೀರಾವರಿಗಾಗಿ ತೊಂದರೆ ಉಂಟಾಗುವುದೆಂದು ಶಂಕಿಸಿ ರಾಯಬಸವನ ಕಾಲುವೆಯಿಂದ ನೀರನ್ನು ಕೊಡುವ ನಿರ್ಧಾರವನ್ನು ರದ್ದುಪಡಿಸುವಂತೆ ಮಾನ್ಯ ಸದಸ್ಯರು ಸರ್ಕಾರದ ಗಮನ ಸೆಳೆದಿರುತ್ತಾರೆ.

ರಾಯಬಸವನ ಕಾಲುವೆಯು ಬಹಳ ಹಳೆಯ ಕಾಲುವೆಯಾಗಿದ್ದು, ಇದರಲ್ಲಿನ ನೀರಿನ ಹರಿಯುವಿಕೆಯ ಸಾಮರ್ಥ್ಯ 250 ಕ್ಯೂಸೆಕ್ಸ್‌ಯಿರುತ್ತದೆ. 8068 ಎಕರೆ ಪ್ರದೇಶದ ನೀರಾವರಿಗಾಗಿ ಸದರಿ ನಾಲೆಯಲ್ಲಿ 200 ಕ್ಯೂಸೆಕ್ಸ್ ಪ್ರಮಾಣದಷ್ಟು ಮಾತ್ರ ನೀರನ್ನು ಒದಗಿಸಲಾಗುತ್ತಿದೆ. ಮೆ: ಜಿಂದಾಲ್ ಉಕ್ಕು ಕಾರ್ಖಾನೆಯವರಿಗೆ ಬೇಕಿರುವ 24 ಎಂಜಿಡಿಯಷ್ಟು (1.40 ಟಿಎಂಸಿ) ನೀರನ್ನು ಅಂದರೆ, 45 ಕ್ಯೂಸೆಕ್ಸ್‌ನಷ್ಟು ನೀರಿನ ಪ್ರಮಾಣವನ್ನು ಸದರಿ ನಾಲೆಯು ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿದ್ದು, ನೀರಾವರಿಗಾಗಿ ಯಾವುದೇ ರೀತಿಯ ತೊಂದರೆಯಾಗುವುದಿಲ್ಲವೆಂದು ಗಮನಿಸಿ ಉದ್ಯಮಕ್ಕೆ ನಾಲೆಯ ಪ್ರಾರಂಭ ಬಾಗದಲ್ಲಿ ನೀರನ್ನು ಕೊಡಲು ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆ.

ಸದರಿ ನಾಲೆಗಳು ಬಹಳ ಹಳೆಯ ನಾಲೆಗಳಾಗಿದ್ದು, ಅನ್-ಲೈನ್ಡ್ ನಾಲೆಗಳಾಗಿರುತ್ತವೆ. ಮತ್ತು ನಾಲೆಗಳಲ್ಲಿ ನಿಗಧಿಗೊಳಿಸಿರುವ ನೀರಿನ ಪ್ರಮಾಣಕ್ಕನುಗುಣವಾಗಿ ನಾಲೆಯ ಸೆಕ್ಷನ್‌ಗಳು ಇಲ್ಲವಾಗಿದ್ದು ಬಹಳ ದುಸ್ಥಿತಿಯಲ್ಲಿರುತ್ತವೆ. ಇದನ್ನು ಗಮನಿಸಿ ಹಾಗೂ ನೀರಾವರಿಗಾಗಿ ಯಾವುದೇ ರೀತಿಯ ತೊಂದರೆ ಆಗದಂತೆ ನೋಡಿಕೊಳ್ಳುವ ಸಲುವಾಗಿ ಸದರಿ ನಾಲೆಗಳ ಮುಖಾಂತರ ನೀರನ್ನು ಬಳಸುವ ಉದ್ಯಮಗಳ ಖರ್ಚಿನಲ್ಲಿಯೇ ಸದರಿ ನಾಲೆಗಳ ಮುಖಾಂತರ ನೀರನ್ನು ಬಳಸುವ ಉದ್ಯಮಗಳ ಖರ್ಚಿನಲ್ಲಿಯೇ ಸದರಿ ನಾಲೆಗಳ ದುರಸ್ಥಿ ಕಾಮಗಾರಿಗಳನ್ನು ಮಾಡಿಸಿ ನೀರಾವರಿಗಾಗಿ ಹಾಗೂ ಉಕ್ಕು ಕಾರ್ಖಾನೆಯ ನೀರಿನ ಬಳಕೆಗಾಗಿ ಅಗತ್ಯ ನೀರಿನ ಪ್ರಮಾಣವನ್ನು ನಾಲೆಯಲ್ಲಿ ಒದಗಿಸಲು ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುತ್ತಿದೆ. ಇದರ ಬಗ್ಗೆ ನಾಲೆಗಳ ದುರಸ್ಥಿ ಕಾಮಗಾರಿಗಳಿಗಾಗಿ ಯೋಜನಾಧಿಕಾರಿಗಳು ಸುಮಾರು 19.75 ಕೋಟಿಗಳ ಅಂದಾಜು ಪ್ರಸ್ತಾವನೆಯನ್ನೂಸಹ ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಉದ್ಯಮವು ಬಳಸುವ ನೀರಿನ ಪ್ರಮಾಣವನ್ನು ತುಂಗಭದ್ರಾ ಜಲಾಶಯದಡಿಯಲ್ಲಿ ಕರ್ನಾಟಕ ಪಾಲಿನಿಂದ ನೀಡಲಾಗುವುದೇ ವಿನಃ ರಾಯಬಸವನ ಕಾಲುವೆಗಳಿಗಾಗಿ ನಿಗಧಿಗೊಳಿಸಿರುವ ನೀರಿನ ಪ್ರಮಾಣದಿಂದಾಗಲೀ ಅಥವಾ ನಿಗಧಿಗೊಳಿಸಿರುವ ನೀರಿನ ಪ್ರಮಾಣದಲ್ಲಿ ಕಡಿತಗೊಳಿಸಿ ಉದ್ಯಮಕ್ಕೆ ನೀರನ್ನು ಕೊಡಬೇಕೆಂಬ ಯಾವುದೇ ನಿರ್ಧಾರವು ಸರ್ಕಾರಕ್ಕೆ ಇರುವುದಿಲ್ಲ.

ಆದಕಾರಣ, ಸದರಿ ನಾಲೆಗಳಲ್ಲಿ ಬರುವ ಅಚ್ಚುಕಟ್ಟುದಾರರುಗಳಾಗಲಿ ಹಾಗೂ ಮಾನ್ಯ ಸದಸ್ಯರುಗಳಾಗಲಿ ರಾಯಬಸವನ ಕಾಲುವೆಯಿಂದ ಮೆ: ಜಿಂದಾಲ್ ಉಕ್ಕು ಕಾರ್ಖಾನೆಗಾಗಿ 24 ಎಂಜಿಡಿ ನೀರನ್ನು ನೀಡಿದಲ್ಲಿ ಅಚ್ಚುಕಟ್ಟುದಾರರಿಗೆ ನೀರಾವರಿಗಾಗಿ ತೊಂದರೆಯುಂಟಾಗುವುದೆಂಬ ಸಂದೇಹವನ್ನು ಪಡಬೇಕಿಲ್ಲ. ಈ ನೀರಿನ ಪ್ರಮಾಣವನ್ನು ಕರ್ನಾಟಕ ಕೋಟಾದಿಂದ ಭರಿಸಲಾಗುವುದೆಂದು ಮತ್ತೊಮ್ಮೆ ಸ್ಪಷ್ಟೀಕರಿಸುತ್ತೇನೆ.

ಶ್ರೀ ಜಿ. ಶಂಕರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರದಿಂದ ನನಗೆ ತೃಪ್ತಿಯಾಗಿದೆ. ಆದರೆ ಮಾನ್ಯ ಸಚಿವರು ಕೊಟ್ಟ ಆಶ್ವಾಸನೆಯನ್ನು ಕಾಯ್ದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಆ ಕಾಲುವೆಗೆ ಸುಮಾರು 20 ಕೋಟಿ ರೂಪಾಯಿಗಳ ವೆಚ್ಚ ಮಾಡಿ ಆಧುನೀಕರಣಗೊಳಿಸಿಕೊಡಲಾಗುವುದು. ಮಾನ್ಯ ಸದಸ್ಯರಿಗೆ ಏನು ಭರವಸೆ ಕೊಟ್ಟಿದ್ದೇನೆ ಅದನ್ನು ಕಾಯ್ದುಕೊಳ್ಳುತ್ತೇನೆ.

ರಾಜ್ಯದಲ್ಲಿ ಸಂಗ್ರಹಿಸಲಾಗುತ್ತಿರುವ ಅಧಿಕ ಪ್ರಮಾಣದ ಮರಳನ್ನು 5 ವರ್ಷಗಳವರೆಗೆ ಗುತ್ತಿಗೆ ನೀಡುತ್ತಿದ್ದು ಸರ್ಕಾರದ ಬೊಕ್ಕಸಕ್ಕೆ ತುಂಬಾ ನಷ್ಟವಾಗುತ್ತಿರುವುದರಿಂದ, ಮರಳಿನ ಪ್ರಮಾಣಕ್ಕೆ ಅನುಗುಣವಾಗಿ ಸ್ವಾಮ್ಯ ಶುಲ್ಕವನ್ನು ವಿಧಿಸುವ ಪದ್ಧತಿ ಅನುಷ್ಠಾನ ಗೊಳಿಸುವುದು.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸಂಗ್ರಹಿಸಲಾಗುತ್ತಿರುವ ಅಧಿಕ ಪ್ರಮಾಣದ ಮರಳನ್ನು 5 ವರ್ಷಗಳವರೆಗೆ ಗುತ್ತಿಗೆಗೆ ನೀಡಲಾಗುತ್ತಿದ್ದು ಸರ್ಕಾರದ ಬೊಕ್ಕಸಕ್ಕೆ ತುಂಬಾ ನಷ್ಟವಾಗುತ್ತಿರುವುದರಿಂದ ಮರಳಿನ ಪ್ರಮಾಣಕ್ಕೆ ಅನುಗುಣವಾಗಿ ಸ್ವಾಮ್ಯ ಶುಲ್ಕವನ್ನು ವಿಧಿಸುವ ಪದ್ಧತಿ ಅನುಷ್ಠಾನಗೊಳಿಸುವ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಡಿ. ಜಯರಾಮ್ : (ಗಣಿ ಮತ್ತು ಭೂವಿಜ್ಞಾನ ಸಚಿವರು) ರಾಜ್ಯದಲ್ಲಿ ಮರಳು ಸಾಗಾಣಿಕೆಯ ಬಗ್ಗೆ ಹಾಗೂ ಈ ರೀತಿಯ ಸಾಗಾಣಿಕೆ ಮಾಡಿ ಮರಳಿನ ಮೇಲೆ ರಾಜಧನ ವಸೂಲಿ ಮಾಡುವ ಕುರಿತು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994 ರಲ್ಲಿ ಕಾರ್ಯವಿಧಾನವನ್ನು ಅಳವಡಿಸಲಾಗಿದೆ. ಸದರಿ ನಿಯಮದಲ್ಲಿಯ ನಿಮಯಗಳ 21 ರಿಂದ 31 ರಲ್ಲಿನ ಉಪ ಬಂಧಗಳಲ್ಲಿ ವಿವರಿಸಿರುವಂತೆ ಆಸಕ್ತ ಸಾರ್ವಜನಿಕರಿಂದ ಮರಳು ಗುತ್ತಿಗೆ ನೀಡಲು ಕೋರಿ ಸಲ್ಲಿಸಲ್ಪಟ್ಟ ಅರ್ಜಿಗಳನ್ನು ಪರಿಶೀಲಿಸಿದ ನಂತರ ನಿಯಮ 8(5) (II) ರ ರೀತ್ಯ ಕಂದಾಯ ಇಲಾಖೆಯ ತಹಶೀಲ್ದಾರ್‌ರವರ ಅಭಿಪ್ರಾಯ ಪಡೆದು ಸದರಿ ಇಲಾಖೆಯ ಶಿಫಾರಸ್ಸಿನ ಮೇರೆಗೆ 5 ವರ್ಷಗಳ ಅವಧಿಗೆ ಮರಳನ್ನು ಸಾಗಿಸಲು ಗುತ್ತಿಗೆ ನೀಡಲಾಗುತ್ತದೆ. ಈ ರೀತಿ ಗುತ್ತಿಗೆ ನೀಡಲು ಗರಿಷ್ಟ ಮಿತಿ 25 ಎಕರೆಗಳಾಗಿರುತ್ತದೆ.